## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.

**C.C. 1634-22**

ಪಿ.ಡಬ್ಲ್ಯೂ- 2
ಸಿ.ಡಬ್ಲ್ಯೂ-10

ಸಾಕ್ಷಿದಾರರ ಹೆಸರು : ಪಾಯಲ್ ಜೈನ್

ತಂದೆ ಹೆಸರು : ಗೌತಮ್‌ಚಂದ ಜೈನ್

ವಯಸ್ಸು : 26 ವರ್ಷ

ಉದ್ಯೋಗ : ಮನೆಗೆಲಸ

ವಾಸಸ್ಥಳ : ಬೆಂಗಳೂರು

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.04.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನಗೆ ಅಣ್ಣನಾಗಬೇಕು. ಮೃತ ನಿರ್ಮಲಾ ನನ್ನ ತಾಯಿ. ದಿಃ 22.2.2022 ರಂದು ನಾನು ಮತ್ತು ನನ್ನ ತಾಯಿ ನನ್ನ ಬೈಕ್ ನಂಃ ಕೆಎ-25/ ಇ ಎನ್ 1250 ನೇದ್ದರ ಮೇಲೆ ಮಾರ್ಕೇಟ್ ಗೆ ಹೋಗಿದ್ದೆವು. ಸಾಯಂಕಾಲ 7 ಗಂಟೆಗೆ ಮರಳಿ ಮನೆಗೆ ಬರಲು ಕುಸುಗಲ್ ರೋಡ ಮೂಲಕ ಬರುತ್ತಿದ್ದೆವು. ನಾವು ಸರ್ವೋದಯ ಸರ್ಕಲ್ ಗಿಂತ ಸ್ವಲ್ಪ ಮುಂಚೆ ಹೋಗುತ್ತಿದ್ದಾಗ ನಮ್ಮ ಹಿಂದಿನಿಂದ ಅದರ ಚಾಲಕನು ನಿರ್ಲಕ್ಷ್ಯತನದಿಂದ ನಡೆಸಿಕೊಂಡು ಬಂದು ನನ್ನ ಬೈಕಿಗೆ ಅಪಘಾತಪಡಿಸಿದ. ಆತನಿಗೆ ತನ್ನ ಬಲಬದಿ ಸಾಕಷ್ಟು ರಸ್ತೆ ಇದ್ದರೂ ಸಹಿತ ಆ ಅಪಘಾತಪಡಿಸಿದ್ದಾನೆ. ಆ ಅಪಘಾತದ ಕಾರಣ ನಾನು ಬೈಕಿನ ಸಮೇತ ಮುಂದೆ ಹೋಗಿ ಬಿದ್ದೆ, ಹಿಂಬದಿ ಸವಾರಳಾದ ನನ್ನ ತಾಯಿ ಸಹ ಬಿದ್ದಳು. ಕಾರ್ ಚಾಲಕನು ನನ್ನ ತಾಯಿಯ ಮೇಲೆ ತನ್ನ ವಾಹನವನ್ನು ನಡೆಸಿಕೊಂಡು ಹೋದ. ನಾನು ಆತನಿಗೆ ವಾಹನ ಮುಂದೆ ಓಡಿಸಬೇಡವೆಂದು ಹೇಳುತ್ತಿದ್ದರೂ ಸಹಿತ ಆತ ಹಾಗೆಯೇ ನಡೆಸಿಕೊಂಡು ನನ್ನ ತಾಯಿಯ ಮೇಲೆ ಚಲಾಯಿಸಿಕೊಂಡು ಹೋದ. ಆತ ಮುಂದೆ ಕುಸುಗಲ್ ರೋಡ ಕಡೆಗೆ ಹೋದ.

ಕೂಡಲೇ ನನ್ನ ಅಣ್ಣನಿಗೆ ಫೋನ್ ಮಾಡಿದೆ ಮತ್ತು ನನ್ನ ತಾಯಿಯನ್ನು ಕರೆದುಕೊಂಡು ಸಿಟಿ ಆಸ್ಪತ್ರೆಗೆ ಹೋದೆವು. ಆಸ್ಪತ್ರೆಯಲ್ಲಿ ನನ್ನ ತಾಯಿ ಮರಣ ಹೊಂದಿದ್ದಾಳೆ ಎಂದು ವೈದ್ಯರು ಹೇಳಿದರು. ಆ ನಂತರ ನನ್ನ ಅಣ್ಣ ಪೋಲಿಸ ಠಾಣೆಗೆ ಹೋಗಿ ದೂರು ಕೊಟ್ಟರು. ಆ ನಂತರ ನಾನು ಸಹ ಪೋಲಿಸರಿಗೆ ಅಪಘಾತದ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ.

ಮರುದಿನ ಮುಂಜಾನೆ 10.30 ಗಂಟೆಗೆ ಪೋಲಿಸರಿಗೆ ನಾನು ಅಪಘಾತವಾದ ಸ್ಥಳವನ್ನು ತೋರಿಸಿದ್ದೇನೆ. ಆಗ ನನ್ನ ಅಣ್ಣ ಸಹ ಇದ್ದ ಆತನ ಜೊತೆ ಪಂಚರು ಸಹ ಇದ್ದರು. ಆ ಪಂಚರು ಅಂದರೆ ಚಾಸಾ-2 ಮತ್ತು 3 ರವರು ಇರುತ್ತಾರೆ. ಪೋಲಿಸರು ಅಪಘಾತ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ನಾನು ಸ್ಥಳ ತೋರಿಸಿದ ಬಗ್ಗೆ ನನ್ನ ಸಹಿ ಪಡೆದಿರುತ್ತಾರೆ. ಈಗ ಅಪರಾಧ ಸ್ಥಳ ಪಂಚನಾಮೆ ನೋಡುತ್ತಿದ್ದು ಅದನ್ನು ನಿಪಿ.3 ಎಂದು, ಸಾಕ್ಷಿ ಸಹಿಯನ್ನು ನಿಪಿ.3-ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ 2 ಪೊಟೋಗಳನ್ನು ನಿಪಿ.4 ಮತ್ತು 5 ಎಂದು ಮತ್ತು ಅವುಗಳ ಸಿ ಡಿ ಯನ್ನು ನಿಪಿ.6 ಎಂದು ಗುರುತಿಸಲಾಯಿತು.

ದಿಃ 24.2.2022 ರಂದು ಪೋಲಿಸರು ನನಗೆ ಪುನಃ ಪೋಲಿಸ ಠಾಣೆಗೆ ಕರೆಸಿದ್ದರು. ಅಲ್ಲಿ ಆರೋಪಿ ಇದ್ದ. ಆತನನ್ನು ನಾನು ನೋಡಿ ಗುರುತಿಸಿದೆ. ಆತನ ಹೆಸರು ರಾಜೇಶ ಎಂದು ಗೊತ್ತಾಯಿತು. ಆತ ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾಗಿದ್ದಾನೆ. ಆತನನ್ನು ಪೋಲಿಸ ಠಾಣೆಯಲ್ಲಿ ಗುರುತಿಸಿದ ಬಗ್ಗೆ ಒಂದು ಪೊಟೋ ನೋಡುತ್ತಿದ್ದು ಅದನ್ನು ನಿಪಿ.7 ಎಂದು ಗುರುತಿಸಲಾಯಿತು. (ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ)

ಅದೇ ದಿನ ಪೋಲಿಸರು ನನ್ನ ದ್ವಿ ಚಕ್ರ ವಾಹನ ಮತ್ತು ಆತನ ಕಾರನ್ನು ತೋರಿಸಿದರು, ಅವುಗಳನ್ನು ನಾನು ನೋಡಿ ಗುರುತಿಸಿರುತ್ತೇನೆ. ಆ ಬಗ್ಗೆ ಈಗ ನಿಪಿ.2 ಭಾವಚಿತ್ರದಲ್ಲಿ ನಾನು ಕಾರ್ ಗುರುತಿಸಿರುವುದು ಕಂಡುಬರುತ್ತದೆ. ಆ ಭಾವಚಿತ್ರದಲ್ಲಿ ನನ್ನ ದ್ವಿ ಚಕ್ರವು ಸಹ ಇದೆ. ಆ ಬಗ್ಗೆ ನಾನು ಮರು ಹೇಳಿಕೆಯನ್ನು ಸಹ ಕೊಟ್ಟಿರುತ್ತೇನೆ.

ಆ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆ ಅಪಘಾತವಾದ ತಕ್ಷಣ ಆ ಕಾರ್ ನಂಬರ ನಾನು ನೋಡಿರಲಿಲ್ಲ. ನಾನು ಹೇಳಿದ ಅಪಘಾತವಾದ ನಂತರ ಕಾರ್ ನಿಲ್ಲಿಸುವಂತೆ ನಾನು ಹೇಳುವಾಗ ಸ್ವಲ್ಪ ದೂರದಲ್ಲಿಯೇ ಇದ್ದೆ. ನಾನು ಕೇಶ್ವಾಪೂರ ಕಡೆಗೆ ರಸ್ತೆಯ ಎಡಗಡೆಯಿಂದ ಹೊರಟಿದ್ದೆ. ನಾನು ಮತ್ತು ನನ್ನ ತಾಯಿ ಬಿದ್ದ ಸ್ಥಳದ ನಡುವೆ ಸುಮಾರು 20 ಅಡಿ ದೂರವಿತ್ತು. ನನ್ನ ಬೈಕಿಗೆ ಕಾರಿನ ಮುಂದಿನ ಮಧ್ಯಭಾಗದಿಂದ ಅಪಘಾತವಾಗಿದೆ. ನನ್ನ ತಾಯಿಯ ರಸ್ತೆಯ ಬಲಬದಿ ಬಿದ್ದಳು, ನನ್ನ ಬೈಕ್ ಮುಂದೆ ದೂಡಲ್ಪಟ್ಟಿತು. ಆ ದಿನ ಆ ಕಾರನ್ನು ಯಾರು ನಡೆಸುತ್ತಿದ್ದರು ಎಂದು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಅಂದರೆ ಸರಿಯಲ್ಲ. ಪೋಲಿಸರು ಹೇಳಿದ ಮೇರೆಗೆ ಮಾತ್ರ ನಾನು ಆರೋಪಿಯನ್ನು ಗುರುತಿಸಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಅಣ್ಣನಿಗೆ ಫೋನ್ ಮಾಡಿದಾಗ ಅಂದಾಜು ರಾತ್ರಿ 7.20 ರಿಂದ 7.30 ಗಂಟೆಯಾಗಿತ್ತು. ನಾನು ಅಪಘಾತದ ಸ್ಥಳದಿಂದಲೇ ಫೋನ್ ಮಾಡಿದ್ದೆ. ಅಪಘಾತವಾದ ನಂತರ ಸುಮಾರು 10 ನಿಮಿಷಗಳವರೆಗೆ ಅಂಬುಲೆನ್ಸಗೆ ಕಾಯ್ದು ಆಮೇಲೆ ಆಸ್ಪತ್ರೆಗೆ ಹೋದೆವು. ಸುಮಾರು 10-15 ನಿಮಿಷಗಳಲ್ಲಿ ಆಸ್ಪತ್ರೆಗೆ ಹೋಗಲು ಸಮಯ ತೆಗೆದುಕೊಂಡಿದ್ದೆವು.

ಗುನ್ಹೆ ಸ್ಥಳದ ಪಂಚನಾಮೆಯನ್ನು ಮುಂಜಾನೆ 10 ರಿಂದ 10.30 ವರೆಗೆ ಮಾಡಿದ್ದರು. ಆ ಸ್ಥಳದ ಉತ್ತರಕ್ಕೆಃ ಸಿಟಿ ಬಸ್ ಸ್ಟಾಪ್ ಇತ್ತು. ದಕ್ಷಿಣಕ್ಕೆಃ ವಾಟರ್ ಟ್ಯಾಂಕ ಇದೆ. ಪೂರ್ವ - ಪಶ್ಚಿಮಕ್ಕೆಃ ರಸ್ತೆ ಇದೆ. ಆ ಪಂಚರನ್ನು ನಾನೇ ಕರೆದುಕೊಂಡು ಹೋಗಿದ್ದೆ ಅಂದರೆ ಸರಿಯಲ್ಲ. ನಾನು ಪಂಚನಾಮೆಗೆ ಪೋಲಿಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಅಂದರೆ ಸರಿಯಲ್ಲ. ನಾನು ಹೋಗುವ ಕಾಲಕ್ಕೆ ಪಂಚನಾಮೆ ಮೇಲೆ ಸಹಿ ಮಾಡಿದ್ದೇನೆ. ಆ ಪಂಚನಾಮೆಯು ಎಷ್ಟು ಪುಟವಿದೆ ಎಂದು ನೆನಪಿಲ್ಲ.

ಘಟನೆಯ ಬಗ್ಗೆ ನನಗೆ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ ಅಂದರೆ ಸರಿ. ನಾನು ಬಿ ಬಿ ಎ ವ್ಯಾಸಂಗವನ್ನು ಮಾಡಿದ್ದೇನೆ. ವಿಮೆ ಕಂಪನಿಯಿಂದ ಪರಿಹಾರ ಪಡೆಯಲು ನಾನು ಆರೋಪಿಯ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೆ ಮತ್ತು ಆ ಅಪಘಾತಕ್ಕೆ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ಸುಳ್ಳು ಕೇಸ್ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.